# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಮಲ್ಲಯ್ಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹಿರೇಕೊಟ್ನೆಕಲ್ ಗ್ರಾಮ ಪಂಚಾಯಿತಿ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ವಿಚಾರಣೆ- ಅಂತಿಮ ಆದೇಶ ಹೊರಡಿಸುವ ಕುರಿತು – ಆದೇಶ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/475/ಗ್ರಾಪಂಕಾ/2016, ದಿನಾಂಕ: 06-09-2016.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ವರದಿ ಅ.ಸ.ಪ.ಸಂಖ್ಯೆ: UPLOK-1/DE/394/2016/ARE-09, ದಿನಾಂಕ: 05-12-2018.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಶಿಫಾರಸ್ಸು ಅ.ಸ.ಪ.ಸಂಖ್ಯೆ: UPLOK-1/DE/394/2016/ARE-09, ದಿನಾಂಕ: 07-12-2018.
4. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ/564/ಗ್ರಾಪಂಕಾ/2018, ದಿನಾಂಕ: 26-12-2018.
5. ಶ್ರೀ ಮಲ್ಲಯ್ಯ, ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 17-01-2019.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಮಲ್ಲಯ್ಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹಿರೇಕೊಟ್ನೆಕಲ್ ಗ್ರಾಮ ಪಂಚಾಯಿತಿ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-A ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಯಿತು. ಅದರಂತೆ ಅಪರ ನಿಬಂಧಕರು, ವಿಚಾರಣೆಗಳು-9, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8 ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

"ದೋಷಾರೋಪಣೆ":

"ಶ್ರೀ ಮಲ್ಲಯ್ಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹಿರೇಕೊಟ್ನೆಕಲ್ ಗ್ರಾಮ ಪಂಚಾಯಿತಿ, ಆದ ನೀವು– ಅಕ್ಷರ ದಾಸೋಹ ಕಾರ್ಯಕ್ರಮ ಮಾರ್ಗಸೂಚಿಯಲ್ಲಿ ಅಡಿಗೆ ಸಿಬ್ಬಂದಿ ನೇಮಕಾತಿ ಅಂತಿಮ ಅನುಮೋದನೆಯನ್ನು ತಾಲ್ಲೂಕು ಪಂಚಾಯತ್ ಕಾರ್ಯಾಲಯದಿಂದ ಅಂತಿಮ ಅನುಮೋದನೆ ಮಾಡಿಸಬೇಕು ಎಂಬ ನಿಯಮವನ್ನು ಉಲ್ಲಂಘಿಸಿ ಶ್ರೀಮತಿ ನಿರ್ಮಲಾ ಗಂಡ ಸಣ್ಣಅಯ್ಯಪ್ಪ ರವರನ್ನು ಅಡವಿ ಅಮರೇಶ್ವರ ಸರ್ಕಾರಿ ಪ್ರೌಢಶಾಲೆಯಲ್ಲಿ ನೀವೇ ಅಂತಿಮ ಅನುಮೋದನೆ ಪತ್ರಕ್ಕೆ ಸಹಿ ಮಾಡಿ ಸರ್ಕಾರದ ಮಾರ್ಗಸೂಚಿಯಲ್ಲಿನ ನಿಯಮದ ಅಧ್ಯಾಯ 7.1 ರ ಉಲ್ಲಂಘನೆ ಮಾಡಿರುತ್ತೀರಾ. ಆದ್ದರಿಂದ, ನೀವು ಕರ್ತವ್ಯಲೋಪವೆಸಗಿ ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii) ರಡಿಯಲ್ಲಿ ದುರ್ನಡತೆಯನ್ನು ಎಸಗಿರುತ್ತಾರೆ."

ಮಾನ್ಯ ಉಪಲೋಕಾಯುಕ್ತ ರವರು ಶ್ರೀ ಮಲ್ಲಯ್ಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇವರ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು ನಿಯಮ ರನ್ವಯ "ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮಗಳೊಂದಿಗೆ ತಡೆಹಿಡಿಯುವ ದಂಡನೆ" ವಿಧಿಸಲು ಮೇಲೆ ಕ್ರಮ ಸಂಖ್ಯೆ(2) ರ ವರದಿಯೊಂದಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ(3)ರಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಸಂಬಂಧ ಶ್ರೀ ಮಲ್ಲಯ್ಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇವರಿಗೆ ನಿಯಮಾನುಸಾರ ಕ್ರಮ ಸಂಖ್ಯೆ(4) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ 2ನೇ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಲಾಗಿತ್ತು. ಸದರಿ ನೋಟೀಸಿಗೆ ಉಲ್ಲೇಖ(5) ರಲ್ಲಿ ಕೆಳಗಿನಂತೆ ಸಮಜಾಯಿಷಿಯನ್ನು ನೀಡಿರುತ್ತಾರೆ.

- ಅಕ್ಷರ ದಾಸೋಹ ಕಾರ್ಯಕ್ರಮ ಮಾರ್ಗಸೂಚಿಯನ್ನು ಉಲ್ಲಂಘಿಸಿರುವುದಿಲ್ಲ.
- ನಮ್ಮ ಗ್ರಾಮ ಪಂಚಾಯಿತಿಯಿಂದ ಮಾರ್ಗಸೂಚಿ ಪ್ರಕಾರ ಸಭೆಯನ್ನು ನಡೆಸಿ ಅಂತಿಮ ಅನುಮೋದನೆಗೆ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ದಿನಾಂಕ: 28-06-2014 ರಂದು ಆಯ್ಕೆ ಮಾಡಿದ ಸಭೆಯ ನಡವಳಿಯನ್ನು ಸಲ್ಲಿಸಿರುತ್ತೇನೆ.
- ಸರ್ಕಾರ ಮಾರ್ಗಸೂಚಿ ಪ್ರಕಾರ ತಾಲ್ಲೂಕು ಪಂಚಾಯಿತಿ ಕಾರ್ಯಾಲಯ ಅಕ್ಷರ ದಾಸೋಹ ವಿಭಾಗ ದಿನಾಂಕ: 16-07-2014 ರಂದು ಜ್ಞಾಪನ ಪತ್ರದ ಮೂಲಕ ಅಡುಗೆ ಸಿಬ್ಬಂದಿಗೆ ಅನುಮೋದನೆ ನೀಡಿ ಕರ್ತವ್ಯಕ್ಕೆ ಹಾಜರಾಗುವ ಕುರಿತು ಅಂತಿಮ ಆದೇಶವನ್ನು ನೀಡಿರುತ್ತಾರೆ. ದಿನಾಂಕ: 28-06-2014 ರಲ್ಲಿ ನಡೆಸಿದ ಸಭೆಯಲ್ಲಿ ನಾನು ಸಹ ಕಾರ್ಯದರ್ಶಿಯಾಗಿ ಭಾಗವಹಿಸಿದ್ದು, ಮಾರ್ಗಸೂಚಿ ಅನುಸಾರ ಸಭೆ ನಡೆಸಿ ನಿಯಮಾನುಸಾರ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ.
- ತದನಂತರ ಇದರ ಬಗ್ಗೆ ನನ್ನ ಯಾವುದೇ ಪಾತ್ರ ಇರುವುದಿಲ್ಲ ಮತ್ತು ಮಾನ್ಯ ಉಪಲೋಕಾಯುಕ್ತರ ನ್ಯಾಯಾಯಲದಲ್ಲಿ ಪ್ರಕರಣ ನಡೆಸುವ ಬಗ್ಗೆ ನಮ್ಮ ವಕೀಲರನ್ನು ಭೇಟಿಮಾಡಿ ಸಂಬಂಧಿಸಿದ ದಾಖಲೆಗಳನ್ನು ನೀಡಿರುತ್ತೇನೆ ಆದರೆ ನಮ್ಮ ವಕೀಲರು ಸರಿಇಯಾದ ಸಮಯದಲ್ಲಿ ಸೂಕ್ತ ಮಾರ್ಗದರ್ಶನ ನೀಡದೆ ನಾನು ಕಾರ್ಯಾಲಯದ ಕೆಲಸ ಒತ್ತಡದಿಂದಾಗಿ ನಾನು ಬೆಂಗಳೂರಿಗೆ ಬಂದು ಹೋಗಲು ಸಾಧ್ಯವಾಗದೇ ನ್ಯಾಯಾಲಯದಲ್ಲಿ ಸಂಬಂಧಪಟ್ಟ ದಾಖಲೆಗಳನ್ನು ಒದಗಿಸಿರುವ ಬಗ್ಗೆ ಮಾಹಿತಿ ತಿಳಿಯದೇ ಮಾನ್ಯ ಉಪಲೋಕಾಯುಕ್ತರು ದಿನಾಂಕ:07-12-2018 ರಂದು ಶಿಫಾರಸ್ಸಿನ ಪ್ರತಿಯನ್ನು ಇತ್ತೀಚಿಗೆ ಪಡೆದಿರುತ್ತೇನೆ ಮತ್ತು ಮೊದಲನೇ ನೋಟೀಸ್ ಸಹ ನನಗೆ ತಲುಪಿರುವುದಿಲ್ಲ.
- ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸಿನಂತೆ ನಾನು ಯಾವುದೇ ಸರ್ಕಾರಿ ನೌಕರರಿಗೆ ತರವಲ್ಲದ ರೀತಿ ಅಧಿಕಾರ ದುರುಪಯೋಗ ಮಾಡಿಕೊಂಡಿರುವುದಿಲ್ಲ ಮತ್ತು ನಡೆದುಕೊಂಡಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಸದರಿ ಪ್ರಕರಣದ ಕುರಿತು ಅಪರ ನಿಬಂಧಕರು ವಿಚಾರಣೆಗಳು 9 ಕರ್ನಾಟಕ ಲೋಕಾಯುಕ್ತ ರವರು ವಿಚಾರಣಾಧಿಕಾರಿಯವರು, ವಿಚಾರಣೆ ನಡೆಸಿ ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಆಪಾದಿತ ನೌಕರರ ವಿರುದ್ಧ ಆರೋಪವು ಸಾಬೀತಾಗಿರುವುದಕ್ಕೆ ವಿವರವಾದ ವರದಿಯ ಪ್ರಮುಖ ಅಂಶಗಳು ಈ ಕೆಳಗಿನಂತೆ ಪುನರುಚ್ಚರಿಸಿದೆ:-

Ex.p6 letter dated 06/08/2014 of Head Master Government high school, Adavi Amareshwara, Manvi taluk as per this document the DGO has not invited the head master of the said school to the general body meeting of the gram Panchayath in respect of appointment of cook cum helper under Akshara Dasoha scheme (Mid day meal scheme). Perused the above said guidelines issued by the Education Department, said guidelines issued by the Education Department, Government of Karnataka regarding implementation of Akshra Dasoha scheme (Mid day meals scheme) along with document produced by Pw.1 complainant and also report submitted by pw.2 and 3 clearly reveals that the DGO as a PDO of the Derekotnakal gram Panchayath has not called preliminary meeting of the committee regarding appointmnet of the cook cum helper. Further there is no document to show that called for the application for the post of cook cum helper and date fixed for interview. And also there is no document to show that publish the same before to 10 days from the date of interview. These are all facts clearly reveals that the DGO has not followed

the guidelines of Akshara Dasoha Scheme (Mid day meals scheme) chapter No.7.1 There is no material evidnce from the said of the DGO to disprove the charge leveled against him. Thereby the siscoplinary authority succeded to prove the charge leveled against the DGO

ಆಪಾದಿತ ನೌಕರರು ಎರಡನೇ ಕಾರಣ ಕೇಳುವ ನೋಟೀಸ್‌ನಲ್ಲಿ ಎತ್ತಿರುವ ಆಕ್ಷೇಪಣೆಗಳಿಗೆ ಸಂಬಂಧಪಟ್ಟಂತೆ ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ಕಾರಣಗಳು ಸಮರ್ಥನೀಯವಾಗಿವೆ. ಆರೋಪಿತ ನೌಕರರು ನೀಡಿರುವ ಮನವಿಯಲ್ಲಿರುವ ವಿವರಣೆಯನ್ನು ಪರಿಶೀಲಿಸಲಾಗಿದೆ. ಎರಡನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಹೇಳಿಕೆ ಸಮರ್ಥನೀಯವಲ್ಲ ಹಾಗೂ ಪರಿಗಣಿಸುವಂತಹ ಯಾವುದೇ ಅಂಶಗಳು ಆಧಾರಗಳು ಕಂಡು ಬರುವುದಿಲ್ಲ. ಈ ವಿವರಣೆಯನ್ನು ಸ್ಥಾಪಿತ ನಿಯಮಾವಳಿಗಳ ಪ್ರಕಾರ ಒಪ್ಪಲು ಸಾಧ್ಯವಿರುವುದಿಲ್ಲ.

ಮಾನ್ಯ ಉಪಲೋಕಾಯುಕ್ತರು ರವರು ದಿನಾಂಕ: 07.12.2018 ರಂದು ಮಾಡಿರುವ ಶಿಫಾರಸ್ಸಿನಲ್ಲಿ ಶ್ರೀ ಮಲ್ಲಯ್ಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹಿರೇಕೊಟ್ನೆಕಲ್ ಗ್ರಾಮ ಪಂಚಾಯಿತಿ, ಇವರಿಗೆ **"ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮಗಳೊಂದಿಗೆ ತಡೆಹಿಡಿಯುವ ದಂಡನೆ"** ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ. ಸರ್ಕಾರವು ಎಲ್ಲಾ ಅಂಶಗಳನ್ನು ಪರಿಶೀಲಿಸಿದ್ದು, ಶ್ರೀ ಮಲ್ಲಯ್ಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರಿಗೆ ಮಾನ್ಯ ಉಪಲೋಕಾಯುಕ್ತರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸಿನನ್ವಯ **"ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮಗಳೊಂದಿಗೆ ತಡೆಹಿಡಿಯುವ ದಂಡನೆ"** ವಿಧಿಸಲು ನಿರ್ಣಯಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/564/ಗ್ರಾಪಂಕಾ/2018,**
**ಬೆಂಗಳೂರು, ದಿನಾಂಕ: 11-03-2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ಮಲ್ಲಯ್ಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹಿರೇಕೊಟ್ನೆಕಲ್ ಗ್ರಾಮ ಪಂಚಾಯಿತಿ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ ಇವರು ಕರ್ನಾಟಕ ನಾಗರೀಕರ ಸೇವಾ ನಿಯಮಗಳು (ನಡತೆ) 1966 ನಿಯಮ 3(1)(i) ರಿಂದ (iii) ರಡಿಯಲ್ಲಿ ದುರ್ನಡತೆಯನ್ನು ಎಸಗಿರುವುದರಿಂದ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಗಳು 1957 ರ ನಿಯಮ 8 (iii) ರ ಅಡಿ **"ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮಗಳೊಂದಿಗೆ ತಡೆಹಿಡಿಯುವ ದಂಡನೆ"** ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
11/3
(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತ-1, ರವರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಅಪರ ನಿಬಂಧಕರು, ವಿಚಾರಣೆಗಳು-9, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ರಾಯಚೂರು ಜಿಲ್ಲೆ.
6. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಮಾನ್ವಿ, ರಾಯಚೂರು ಜಿಲ್ಲೆ.
7. ಶ್ರೀ ಮಲ್ಲಯ್ಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹಿರೇಕೊಟ್ನೆಕಲ್ ಗ್ರಾಮ ಪಂಚಾಯಿತಿ, ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ.
8. ಗಣಕ ಕೋಶ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.